<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.</u>

ಸಿ.ಸಿ.ನಂಃ 46/2018 ಸಿ.ಡಬ್ಲ್ಯೂ –೧ ಪಿ.ಡಬ್ಲ್ಯೂ -೫

| | | |
|---|---|---|
| ಹೆಸರು | ಃ | ಶಾಂತು |
| ತಂದೆಃ ಗಂಡ | ಃ | ಆನಂದರಾವ ಜಮಾದಾರ |
| ವಯಸ್ಸು | ಃ | ೨೪ ವರ್ಷ |
| ಉದ್ಯೋಗ | : | ಚಾಲಕ |
| ವಾಸಸ್ಥಳ | ಃ | ಧರ್ಮವಾಡಿ |

ದಿನಾಂಕಃ ೩೦.೦೭.೨೦೨೪

ಸತ್ಯ ಪ್ರತಿಜ್ಞೆಯ ಮೇರೆಗೆ

---

**<u>ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ</u>**

ಆರೋಪಿತರ ಪರಿಚಯ ಇರುವುದಿಲ್ಲ. ಚಾಸಾ-೫ ರವರ ಪರಿಚಯ ಇರುತ್ತದೆ. ಚಾಸಾ-೨, ರಿಂದ ೪, ೬ ರವರ ಪರಿಚಯ ಇರುವುದಿಲ್ಲ. ಅರೋಪಿತರು ಮತ್ತು ನಮ್ಮ ನಡುವೆ ಯಾವುದೇ ತಕರಾರು ಇರುವುದಿಲ್ಲ. ಆರೋಪಿತರು ನನಗೆ, ಹೊಡೆ ಬಡೆ ಮಾಡಿರುವುದಿಲ್ಲ, ಜೀವ ಬೆದರಿಕೆ ಹಾಕಿರುವುದಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ತಡೆ ಹಿಡಿದಿರುವುದಿಲ್ಲ, ಕಲ್ಲಿನಿಂದ ಜೆ.ಸಿ.ಬಿ. ಗ್ಲಾಸನ್ನು ಒಡೆದಿರುವುದಿಲ್ಲ. ನಾನು ಪೋಲಿಸರಿಗೆ ಯಾವುದೇ ಫಿರ್ಯಾದಿ ಮತ್ತು ಹೇಳಿಕೆಯನ್ನು ನೀಡಿರುವುದಿಲ್ಲ. ಪಂಚನಾಮೆ ಜರುಗಿಸಲು ಯಾವುದೇ ಸ್ಥಳ ತೋರಿಸಿರುವುದಿಲ್ಲ. ಪೋಲಿಸರು ಒಂದು ಸಹಿ ಮಾಡು ಎಂದು ಹೇಳಿದಕ್ಕೆ ಸಹಿ ಮಾಡಿರುತ್ತೇನೆ. ಸಾಕ್ಷಿ ಫಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ, ಫಿರ್ಯಾದಿಯನ್ನು ನಿಪಿ-೪ ಎಂದು, ಸಹಿಯನ್ನು ನಿಪಿ-೪(ಎ) ಎಂದು ಗುರುತಿಸಲಾಯಿತು. ರಾಜಿಯಾಗಿರುತ್ತೇನೆ, ಪ್ರಕರಣ ಮುಂದುವರೆಸುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

**<u>ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.</u>**

ಈಗ ಓದಿ ಹೇಳಿದ ಹಾಗೆ ಪೋಲಿಸರಿಗೆ ಫಿರ್ಯಾದಿಯನ್ನು ಮತ್ತು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ ಅಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂಧರೆ ಸರಿ ಅಲ್ಲ. ಸಾಕ್ಷಿ ಹೇಳಿಕೆಗೆ ವ್ಯತಿರಿಕ್ತವಾಗಿ ನುಡಿದಿದ್ದರಿಂದ ಹೇಳಿಕೆಯನ್ನು ನಿಪಿ-೫ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ.ಎಸ್.ಎನ್. ವಕೀಲರಿಂದ</u>**

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ